Distribution of Free Sites in Municipal limits

121. SRI M. C. BASAPPA (Chamarajanagar).—Will the Minister for Municipal Administration be pleased to state :

(*a*) whether the Government have formulated any scheme for distribution of free sites to the weaker sections of the community living in the Municipal limits;

(*b*) if so, whether Municipalities have implemented the scheme;

(*c*) if sites are distributed (districtwise figures) the figures may be furnished;

(*d*) if not how does the Government proposes to help the weaker sections living in urban areas?

SRI H. C. SRIKANTAIAH (Minister for Municipal Administration).-

(*a*) Yes.

(*b*) Yes.

(*c*) A list of districtwise distribution of sites is appended.

(*d*) Does not arise.

STATEMENT

Showing District wise number of sites is distributed

Bangalore Division :				
1	Deputy Commissioner,	Bangalore	1,135	
2	,,	Tumkur	568	
3	,,	Kolar	628	
4	,,	Chitradurga	6,272	
5	,,	Shimoga	752	
				9,355
Mysore Division :				
6	Deputy Commissioner,	Mysore	525	
7	,,	Mandya	1,058	
8	,,	Hassan	652	
9	,,	Chickmagalur	623	
10	,,	South Kanara	2,137	
11	,,	Coorg	50	
				5,045

Belgaum Division :				
12	Depury Commissioner,	Belgaum	883	
13	,,	Bijapur	1,102	
14	,,	Dharwar	1,346	
15	,,	Karwar	68	
				3,399
Gulbarga Division :				
16	Deputy Commissioner,	Gulbarga	2,220	
17	,,	Bidar	232	
18	,,	Bellary	1,955	
19	,,	Raichur	4,608	
				9015
			Total	26,814

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಹೌದು ಎಂದು ಹೇಳಿದ್ದೀರಿ. ಆ ಯೋಜನೆಯ ರೂಪರೇಶೆಗಳೇನೆಂಬುದನ್ನು ದಯವಿಟ್ಟು ತಿಳಿಸುತ್ತೀರಾ?

† ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಾನ್ಯ ಸಭಾಪತಿಗಳವರೇ, ಶೇಕಡ ೧೮ ರಿಜರ್ವೇಷನ್ ಏನು ಮಾಡಬೇಕೆಂದು ಬಜೆಟಿನಲ್ಲಿ ಹೇಳಿದ್ದೇವೆ. ಆದರಂತೆ ಕೆಲವು ಸ್ಕೀಂಗಳನ್ನು ಹಾಕಿದ್ದೇವೆ ಆದರ ರೂಪರೇಶೆಗಳನ್ನು ತಮಗೆ ಕೊಡಬೇಕು ಎಂದರೆ ಅರ್ಬನ್ ಏರಿಯಾದಲ್ಲಿ ೨೪೦೦ ರೂಪಾಯಿಗಳಿಗಿಂತ ಕಡಿಮೆ ವರಮಾನವಿರತಕ್ಕಂಥವರಿಗೆ ಫ್ರೀ ಸೈಟನ್ನು ಕೊಡತಕ್ಕಂಥದ್ದು, ೨,೪೦೦ ರಿಂದ ೪,೮೦೦ರ ವರೆಗೆ ಇರತಕ್ಕಂಥವರಿಗೆ ೨೫ ಪರ್ಸೆಂಟ್ ಡೆವಲಪ್‌ಮೆಂಟ್ ಚಾರ್ಜ್‌ನ್ನು ಹಾಕತಕ್ಕಂಥಾದ್ದು ಮತ್ತು ೪೮೦೦ ಕ್ಕಿಂಥ ಮೇಲ್ಪಟ್ಟವರಿಗೆ ಪೂರ್ಣ ಹಣವನ್ನು ವಿಧಿಸತಕ್ಕಂಥ ಯೋಜನೆಯನ್ನು ಸರ್ಕಾರದವರು ಹಾಕಿ ಕೊಂಡಿದ್ದಾರೆ. ಆದುದರಿಂದ ೨,೪೦೦ ಕ್ಕಿಂತ ಕಡಿಮೆ ಆದಾಯವಿರತಕ್ಕಂಥ ವೀಕರ್ ಸೆಕ್ಷನ್‌ರವರಿಗೆ ಫ್ರೀ ಸೈಟ್‌ನ್ನು ಕೊಡಬೇಕೆಂದು ತೀರ್ಮಾನಿಸಲಾಗಿದೆ.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ, ಸರ್ಕಾರದವರು ಸೈಟನ್ನು ವೀಕರ್ ಸೆಕ್ಷನ್‌ರವರಿಗೆ ಫ್ರೀ ಆಗಿ ಸೈಟನ್ನು ಹಂಚಲು ತೀರ್ಮಾನ ಮಾಡಿದೆಯೆಂದು ಹೇಳಿದರು. ಈಗ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್‌ರವರು ಲ್ಯಾಂಡ್ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಇನ್‌ಸ್ಟಿಟ್ಯೂಟ್ ಮಾಡುತ್ತಾರೆ, ಅಸಿಸ್ಟೆಂಟ್ ಕಮಿಷನರ್‌ರವರು ಅಕ್ವೈರ್ ಮಾಡಿ ಒಂದು ವರ್ಷದೊಳಗೆ ಹೊಸ ಕಾನೂನಿನ ಪ್ರಕಾರ ಆದನ್ನು ಅವರಿಗೆ ಹ್ಯಾಂಡ್ ಓವರ್ ಮಾಡುತ್ತಾರೆ ಈ ಯೋಜನೆಯನ್ನೇನಾದರೂ ಅಳವಡಿಸಿದ್ದೀರಾ? ಅದಕ್ಕಾಗಿ ಮುನಿಸಿಪಾಲಿಟಿಯವರಿಗೆ ತಾವು ಇಲ್ಲಿಯ ತನಕ ಎಷ್ಟು ಹಣವನ್ನು ಕೊಟ್ಟಿದ್ದೀರಿ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮುನಿಸಿಪಾಲಿಟಿಗೂ ಸಹ ನಾವು ಸಾಕಷ್ಟು ಹಣವನ್ನು ಈಗಾಗಲೇ ಕೊಟ್ಟಿದ್ದೇವೆ. A grant in aid-of Rs. 50 lakhs was sanctioned for forming sites in Urban areas and an amount of Rs. 90,83,663 was sanctioned to various municipalities as seed money for distribution of sites

ಶ್ರೀ ಎಂ. ಸಿ. ಬಸಪ್ಪ.—ಸೀಡ್ ಮನಿ ಅಂತ ಹೇಳಿದರೆ ಜಮೀನು ತೆಗೆದುಕೊಂಡು ಅಕ್ವೈರ್ ಮಾಡಿ ಸೈಟನ್ನು ಹಂಚಿಕೆ ಮಾಡುವಾಗ ಹಣವನ್ನು ವಾಪಸ್ಸು ತೆಗೆದುಕೊಳ್ಳುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಆ ರೀತಿ ಹಣವನ್ನು ತೆಗೆದುಕೊಳ್ಳಬೇಕಾದರೆ ಅದಕ್ಕೂ ಒಂದು ಕಾನೂನು ಮಾಡಿದ್ದೇವೆ, ಕಾರ್ನರ್ ಸೈಟ್ ಮತ್ತು ಹೋಟೆಲ್, ಶಾಪ್ ಸೈಟ್‌ಗಳನ್ನು ಹರಾಜು ಮಾಡಿ ಆ ಹಣವನ್ನು ವಾಪಸ್ಸು ತೆಗೆದುಕೊಳ್ಳಬಹುದೆಂದು ಹೇಳಿದೆ.

ಶ್ರೀ ಎಂ. ಸಿ. ಬಸಪ್ಪ.—ಅದು ಅಲ್ಲಾ ಜನತಾ ಸೈಟ್ ಬಗ್ಗೆ.....

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಜನತಾ ಸೈಟ್‌ಗಳನ್ನು ಯಾರು ಯಾರಿಗೆ ಫ್ರಿಯಾಗಿ ಕೊಡ ಬೇಕು, ಯಾರಿಗೆ ಚಾರ್ಜ್ ಮಾಡಬೇಕೆಂಬುದನ್ನೆಲ್ಲಾ ಆಗಲೇ ಹೇಳಿದ್ದೇನೆ. ಈಗ ತಾವು ಹೇಳಿದ ಹಾಗೆ ಅಕ್ಷೆಪ್ಟರ್ ಮಾಡಲು ಖರ್ಚು ಆಗಿರತಕ್ಕಂಥ ಹಣವನ್ನು ವಾಪಸ್ಸು ತೆಗೆದುಕೊಳ್ಳಬೇಕಾದರೆ ಆಗಲೇ ಹೇಳಿದ ಹಾಗೆ ಕಾರ್ನರ್ ಸೈಟ್, ಹೋಟೆಲ್ ಸೈಟ್‌ಗಳು ಮತ್ತು ಶಾಪ್ ಸೈಟ್‌ಗಳನ್ನು ಹರಾಜು ಮಾಡಿ ಅದರಿಂದ ಬರತಕ್ಕಂಥ ಹಣವನ್ನು ತೆಗೆದುಕೊಳ್ಳಬಹುದೆಂದು ಮಾಡಿದೆ: ಮತ್ತು ೯೦ ಲಕ್ಷ ರೂಪಾಯಿಗಳನ್ನು ಸೀಡ್ ಮನಿಯಾಗಿ ಬೇರೆ ಬೇರೆ ಮುನಿಸಿಪಾಲಿಟೀಸ್‌ಗಳಿಗೆ ಹಂಚಲಾಗಿದೆ.

ಶ್ರೀ ಎಂ. ಸಿ. ಬಸಪ್ಪ.—ತಾವು ೯೦ ಲಕ್ಷ ರೂಪಾಯಿ ಪ್ರೊವೈಡ್ ಮಾಡಿದ್ದೇವೆಂದು ಹೇಳುವು ದಾದರೆ, ಎಷ್ಟೆಷ್ಟು ಜನ ನೀಡೀ ಪರ್ಸನ್ಸ್‌ಗೆ ಸೈಟ್‌ಗಳನ್ನು ಹಂಚಬೇಕಾಗಿದೆ ಎನ್ನುವ ಬಗ್ಗೆ ಏನಾ ದರೂ ಪಟ್ಟಿ ತಯಾರು ಮಾಡಿದ್ದಾರೆಯೇ ಹೇಗೆ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಕೆಲವು ಕಡೆ ಮಾಡಿದ್ದಾರೆ, ಕೆಲವು ಕಡೆ ಇಲ್ಲ ನಿಮ್ಮ ಮೈಸೂರು ಡಿಸ್ಟ್ರಿಕ್ಟ್‌ನ ಮುನಿಸಿಪಾಲಿಟಿಯಲ್ಲಿ ಲಿಸ್ಟ್ ತಯಾರು ಮಾಡಿದ್ದಾರೆ, ಮೈಸೂರು ಮುನಿಸಿ ಪಾಲಿಟಿಯಲ್ಲಿ ೧೧೫೫ ಜನಕ್ಕೆ ಸೈಟ್‌ಗಳನ್ನು ಕೊಟ್ಟಿದ್ದೇವೆ. ನಂಜನಗೂಡಿನಲ್ಲಿ ೧೬೩ ಜನಕ್ಕೆ ಕೊಟ್ಟಿದ್ದೆವೆ, ಆದೇ ರೀತಿ ನಿಮ್ಮ ಊರಿನಲ್ಲಿ ಕೇವಲ ಇಬ್ಬರಿಗೆ ಮಾತ್ರ ಸೈಟನ್ನು ಕೊಡಲಾಗಿದೆ. ಇನ್ನು ಹುಣಸೂರಿ ನಲ್ಲಿ, ಕೆ. ಆರ್. ಪುರಂನಲ್ಲಿ, ಮತ್ತು ಪಿರಿಯಾ ಪಟ್ಟಣದಲ್ಲಿ ಈ ರೀತಿ ಸೈಟ್‌ಗಳನ್ನು ಹಂಚಲಾಗಿದೆ.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ, ನಾನು ಕೇಳುತ್ತಿರುವುದೇನೆಂದರೆ, ಮುನಿಸಿಪಾಲಿಟಿಗಳವರಿಗೆ ನೀಡೀ ಪರ್ಸನ್ಸ್ ಎಷ್ಟೆಷ್ಟು ಜನರಿದ್ದಾರೆ ಎನ್ನುವ ಬಗ್ಗೆ ಮಾಹಿತಿಯನ್ನು ಸಂಗ್ರಹ ಮಾಡುವ ಬಗ್ಗೆ ಏನಾದರೂ ಆದೇಶ ನೀಡಿದ್ದೀರಾ ಹೇಗೆ? ಹಾಗೆ ನೀಡಿಲ್ಲದಿದ್ದರೆ ಇನ್ನೊಮ್ಮೆ ಅವರು ಆ ರೀತಿ ಲಿಸ್ಟನ್ನು ತಯಾರು ಮಾಡಲು ಆಜ್ಞೆ ಮಾಡುತ್ತೀರಾ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಹಿಂದೆ ಆದೇಶ ಕೊಟ್ಟಿದ್ದೇವೆ ಪುನಃ ಆದೇಶ ಕೊಡಿ ಎಂದು ತಾವು ಹೇಳುವುದಾದರೆ ಮಾಡೋಣ.

SRI B. B. SAYANAK.—The Hon. Minister stated that 883 sites have been given in Belgaum District. May I know how many sites have been distributed in Belgaum Municipal area and Nippani Municipal area?

SRI H. C. SRIKANTAIAH.—I am sorry those particulars are not with me now. Let him put a separate question and I will get it.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ, ನಾನು ಸರ್ಕಾರದ ಗಮನಕ್ಕೆ ಒಂದು ವಿಷಯವನ್ನು ತರ ಬಯಸುವುದೇನೆಂದರೆ, ಸರ್ಕಾರದವರು ಎಲ್ಲಾ ಮುನಿಸಿಪಾಲಿಟಿಗೂ ಒಂದು ಆದೇಶ ನೀಡಿ ವೀಕರ್ ಸೆಕ್ಷನ್‌ನಲ್ಲಿ ಎಷ್ಟು ಜನ ನೀಡೀ ಪರ್ಸನ್ಸ್‌ಗೆ ಸೈಟ್‌ಗಳನ್ನು ಹಂಚಬೇಕಾಗಿದೆ ಎನ್ನುವ ಬಗ್ಗೆ ಒಂದು ಲಿಸ್ಟನ್ನು ತಯಾರು ಮಾಡಿದರೆ ಅದರಿಂದ ಎಷ್ಟು ಜನಕ್ಕೆ ಸೈಟ್‌ಗಳನ್ನು ಹಂಚಬೇಕಾಗುತ್ತದೆ ಎಂಬುದು ತಮಗೆ ಗೊತ್ತಾಗುತ್ತದೆ. ಆದಕ್ಕಾಗಿ ಅವರು ಇಷ್ಟು ದಿವಸದೊಳಗಾಗಿ ಲಿಸ್ಟ್ ತಯಾರು ಮಾಡಬೇಕು ಎನ್ನುವ ಬಗ್ಗೆ ಏನಾದರೂ ಅವಧಿ ಗೊತ್ತು ಮಾಡುತ್ತೀರಾ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅವಧಿ ಹೇಳುವುದಕ್ಕೆ ಬರುವುದಿಲ್ಲ, ಅದರ ಜವಾಬ್ದಾರಿ ಯನ್ನು ಸರ್ಕಾರ ಸಂಪೂರ್ಣವಾಗಿ ತೆಗೆದುಕೊಂಡಿರುವುದರಿಂದ, ಈಗಾಗಲೇ ಕೆಲವಾರು ಕಡೆ ಸೈಟ್ ಗಳನ್ನು ಹಂಚಲಾಗಿದೆ, ಮುನಿಸಿಪಾಲಿಟಿಯವರೂ ಕೂಡ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ಆದೇಶ ಕೊಡುತ್ತೇವೆ.

ಶ್ರೀ ಎಚ್. ಎನ್. ಗಂಗಾಧರ್.—ಸ್ವಾಮಿ, ಮೈಸೂರು ಜಿಲ್ಲೆಯಲ್ಲಿ ಎಷ್ಟು ಸೈಟ್‌ಗಳು ಬೇಕಾ ಗಿದೆ ಎಂದು ಅರ್ಜಿಗಳು ಬಂದಿವೆ? ಎಷ್ಟು ಅರ್ಜಿಗಳು ತೀರ್ಮಾನವಾಗಿದೆ ಎನ್ನುವ ಬಗ್ಗೆ ವಿವರ ಕೊಡುತ್ತೀರಾ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಆ ಅಂಕಿ ಅಂಶಗಳು ನನ್ನ ಹತ್ತಿರ ಇಲ್ಲ. ತಾವು ಪ್ರತ್ಯೇಕ ವಾದ ಪ್ರಶ್ನೆಯನ್ನು ಕೇಳಿದರೆ ಉತ್ತರ ಒದಗಿಸಿಕೊಡುತ್ತೇನೆ.